ವಿಷಯ :- ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ವ್ಯಾಪ್ತಿಯಲ್ಲಿ ಹೊಸ ರಸ್ತೆ ಮಾರ್ಗಗಳ ನಿರ್ಮಾಣ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2344 (709)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಹುಬ್ಬಳ್ಳಿ ಎರಡೂ ನಗರ ಕೂಡಿಸಿ : ಮಹಾನಗರ ಮಾಡಿದ ವರ್ಷ ಯಾವುದು

ಆ) ಮಹಾನಗರವೆಂದು ಪ್ರಾರಂಭವಾದ ಮೇಲೆ ಮಹಾನಗರಗಳ ಮಧ್ಯೆ ಸುತ್ತಲೂ ಹಾಗೂ ನಡುವೆ ಯಾವುದೇ ಹೊಸ ಮಾರ್ಗಗಳನ್ನು (ರಸ್ತೆಗಳು) ನಿರ್ಮಾಣ ಮಾಡಲಾಗಿದೆಯೆ. (ವಿವರಣೆ ನೀಡುವುದು)

ಇ) ಸರ್ಕಾರದ ಯೋಜನೆಯಲ್ಲಿ ಯಾವುದೇ ಹೊಸಮಾರ್ಗವನ್ನು ಮಾಡಲು ಉದ್ದೇಶಿಸಿದೆಯೇ? ವಿವರ ನೀಡುವುದು.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :-

ಅ) 1962 ನೇ ವರ್ಷದಲ್ಲಿ

ಆ) ಹೊಸ ಮಾರ್ಗಗಳು ಈ ಕೆಳಕಂಡಂತಿವೆ.

1) ಉಣಕಲ್ ಶ್ರೀ ನಗರದಿಂದ ರಾಷ್ಟ್ರೀಯ ಹೆದ್ದಾರಿ ಕೂಡು ರಸ್ತೆ
2) ಕರಿಗಣ್ಣನರ ಹಕ್ಕಲದಿಂದ ಬಿಡನಳ ಕೂಡು ರಸ್ತೆ
3) ಗೋಕುಲ ರಸ್ತೆಯಿಂದ ಆನಂದ ನಗರಕ್ಕೆ ಕೂಡು ರಸ್ತೆ
4) ಗೋಕುಲ ರಸ್ತೆಯಿಂದ ಕೃಷ್ಣಾಪುರಕ್ಕೆ ಕೂಡು ರಸ್ತೆ
5) ಹೆಗ್ಗೇರಿಯಿಂದ ಕುಷ್ಟರೋಗಿಗಳ ಆಸ್ಪತ್ರೆಗೆ ಕೂಡುರಸ್ತೆ
6) ಹಳೆಹುಬ್ಬಳ್ಳಿ ಸುಭಾಷ್ ನಗರದ ರಸ್ತೆ
7) ವಿಶ್ವೇಶ್ವರ ನಗರದಿಂದ ನೃಪತುಂಗ ರಸ್ತೆ
8) ಮಂಜುನಾಥ ನಗರದಿಂದ ಆನಂದನಗರಕ್ಕೆ ಕೂಡುರಸ್ತೆ
9) ಕೇಕ್ಷಾಪುರದಿಂದ ಹೇಮಂತ ನಗರಕ್ಕೆ ಕೂಡು ರಸ್ತೆ
10) ರಾಮನಗರದಿಂದ ಬೆಳವಣಿಗೆ ಕಾಲನಿ ರಸ್ತೆ
11) ವಿಶ್ವೇಶ್ವರ ನಗರದಿಂದ ಪತ್ರಕರ್ತ ಕಾಲನಿ ಕೂಡು ರಸ್ತೆ

ಇದಲ್ಲದೆ ಹುಬ್ಬಳ್ಳಿ ವಿಭಾಗದಲ್ಲಿ 253 ಹೊಸ ಬಡಾವಣೆಗಳು ಬಂದಿರುವುದರಿಂದ 190 ಕಿ. ಮೀ. ರಸ್ತೆಯನ್ನು ಮಾಡಲಾಗಿದೆ. ಆದರಂತೆ ಧಾರವಾಡ ವಿಭಾಗದಲ್ಲಿ 88 ಹೊಸ ಬಡಾವಣೆಗಳು ಬಂದಿರುವುದರಿಂದ ಸುಮಾರು 53 ಕಿ.ಮೀ. ರಸ್ತೆಯನ್ನು ಮಾಡಲಾಗಿದೆ.